All India Radio: Bangalore
National Bulletin In Kannada
20.05.2026 7.35 am
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು

<>><><*><><<>

ಮುಖ್ಯಾಂಶಗಳು

೧. ಪಂಚರಾಷ್ಟ್ರ ಪ್ರವಾಸದ ಅಂತಿಮ ಚರಣದ ಭಾಗವಾಗಿ ಇಟಲಿ ರೋಮ್ ತಲುಪಿದ ಪ್ರಧಾನಿ ನರೇಂದ್ರ ಮೋದಿ

೨. ಇದೇ ೨೩ ರಿಂದ ಅಮೆರಿಕ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರೂಬಿಯೋ ನಾಲ್ಕು ದಿನಗಳ ಭಾರತ ಭೇಟಿ

೩. ಔಷಧಿಗಳ ಆನ್‌ಲೈನ್ ಮಾರಾಟ ವಿರೋಧಿಸಿ ಇಂದು ದೇಶಾದ್ಯಂತ ಔಷಧ ಮಾರಾಟಗಾರರ ಮುಷ್ಕರ; ಎಂದಿನಂತೆ ಕಾರ್ಯನಿರ್ವಹಿಸಲಿರುವ ಜನೌಷಧಿ ಕೇಂದ್ರಗಳು

೪. ಸಾಫ್ ಮಹಿಳಾ ಫುಟ್ಬಾಲ್ ಚಾಂಪಿಯನ್‌ಶಿಪ್; ೨೮ ಸದಸ್ಯರ ಭಾರತದ ಪ್ರಾಥಮಿಕ ತಂಡ ಪ್ರಕಟ

೫. ಭಾರತೀಯ ಹಾಕಿ ಆಟಗಾರರ ದೈಹಿಕ ಸಾಮರ್ಥ್ಯ ಶ್ಲಾಘಿಸಿದ ಹಿರಿಯ ಕ್ರಿಕೆಟಿಗ ವಿರಾಟ್ ಕೊಹ್ಲಿ

<>><><*><><<>

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ತಮ್ಮ ಐದು ದೇಶಗಳ ಅಧಿಕೃತ ಪ್ರವಾಸದ ಅಂತಿಮ ಚರಣದ ಭಾಗವಾಗಿ ನಿನ್ನೆ ರಾತ್ರಿ ಇಟಲಿಯ ರಾಜಧಾನಿ ರೋಮ್‌ಗೆ ತಲುಪಿದ್ದಾರೆ. ವಿಮಾನ ನಿಲ್ದಾಣದಲ್ಲಿ ಪ್ರಧಾನಿ ಅವರನ್ನು ಇಟಲಿಯ ಉಪ ಪ್ರಧಾನಮಂತ್ರಿ ಹಾಗೂ ವಿದೇಶಾಂಗ ವ್ಯವಹಾರಗಳ ಸಚಿವ ಆಂಟೋನಿಯೊ ತಾಜಾನಿ ಅವರು ಆತ್ಮೀಯವಾಗಿ ಸ್ವಾಗತಿಸಿದರು. ತಮ್ಮ ಈ ಭೇಟಿಯ ಅವಧಿಯಲ್ಲಿ ಪ್ರಧಾನಿ ನರೇಂದ್ರ ಮೋದಿ, ಇಟಲಿಯ ಪ್ರಧಾನಿ ಜಾರ್ಜಿಯಾ ಮೆಲೋನಿ ಮತ್ತು ಅಧ್ಯಕ್ಷ ಸೆರ್ಗಿಯೋ ಮಟ್ಟರೆಲ್ಲಾ ಅವರೊಂದಿಗೆ ದ್ವಿಪಕ್ಷೀಯ ಮಾತುಕತೆ ನಡೆಸಲಿದ್ದಾರೆ. ಈ ಮಾತುಕತೆಯು, ಮುಖ್ಯವಾಗಿ 'ಭಾರತ-ಮಧ್ಯಪ್ರಾಚ್ಯ-ಯುರೋಪ್ ಆರ್ಥಿಕ ಕಾರಿಡಾರ್'-ಐಎಮ್‌ಇಸಿ ಯೋಜನೆಗೆ ವೇಗ ನೀಡುವುದರ ಮೇಲೆ ಕೇಂದ್ರೀಕೃತವಾಗಿರಲಿದ್ದು, ಉಭಯ ದೇಶಗಳ ನಡುವಿನ 'ಜಂಟಿ ಕಾರ್ಯತಂತ್ರದ ಕ್ರಿಯಾ ಯೋಜನೆ ೨೦೨೫-೨೦೨೯' ರ

ಪ್ರಗತಿಯ ಪರಾಮರ್ಶೆಯೂ ನಡೆಯಲಿದೆ.  ಜೊತೆಗೆ, ರೋಮ್‌ನಲ್ಲಿರುವ ವಿಶ್ವಸಂಸ್ಥೆಯ ಆಹಾರ ಮತ್ತು ಕೃಷಿ ಸಂಸ್ಥೆ-ಎಫ್‌ಎಒ ನ ಪ್ರಧಾನ ಕಚೇರಿಗೂ ಭೇಟಿ ನೀಡಲಿರುವ ಪ್ರಧಾನಿ, ಜಾಗತಿಕ ಆಹಾರ ಭದ್ರತೆಯ ಕುರಿತು ಭಾರತದ ಬದ್ಧತೆಯನ್ನು ಪುನರುಚ್ಚರಿಸಲಿದ್ದಾರೆ. ಇಟಲಿಗೆ ಆಗಮಿಸುವ ಮುನ್ನ ನಾರ್ವೆಯ ರಾಜಧಾನಿ ಓಸ್ಲೋದಲ್ಲಿ ನಡೆದ ೩ನೇ ಭಾರತ-ನಾರ್ಡಿಕ್ ಶೃಂಗಸಭೆಯಲ್ಲಿ ಪ್ರಧಾನಿ ಪಾಲ್ಗೊಂಡಿದ್ದರು.  ಈ ಸಂದರ್ಭದಲ್ಲಿ ಭಾರತ ಮತ್ತು ನಾರ್ಡಿಕ್ ದೇಶಗಳಾದ ನಾರ್ವೆ, ಸ್ವೀಡನ್, ಡೆನ್ಮಾರ್ಕ್, ಫಿನ್ಲ್ಯಾಂಡ್ ಮತ್ತು ಐಸ್‌ಲ್ಯಾಂಡ್ ತಮ್ಮ ದ್ವಿಪಕ್ಷೀಯ ಬಾಂಧವ್ಯವನ್ನು 'ಹಸಿರು ತಂತ್ರಜ್ಞಾನ ಮತ್ತು ನಾವೀನ್ಯತೆ ಕಾರ್ಯತಂತ್ರದ ಪಾಲುದಾರಿಕೆ' ಗೆ ಉನ್ನತೀಕರಿಸಿವೆ. ಜಂಟಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಪ್ರಧಾನಿ ನರೇಂದ್ರ ಮೋದಿ, ಕಳೆದ ಒಂದು ದಶಕದಲ್ಲಿ ಭಾರತದಲ್ಲಿ ನಾರ್ಡಿಕ್ ದೇಶಗಳ ಹೂಡಿಕೆಯು ಶೇಕಡಾ ೨೦೦ ರಷ್ಟು ಹೆಚ್ಚಾಗಿದೆ ಎಂದು ಮಾಹಿತಿ ನೀಡಿದರು.

<>><><*><><<>

ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರೂಬಿಯೋ ಅವರು ಇದೇ ೨೩ ರಿಂದ ಭಾರತಕ್ಕೆ ನಾಲ್ಕು ದಿನಗಳ ಅಧಿಕೃತ ಭೇಟಿ ನೀಡಲಿದ್ದಾರೆ ಎಂದು ಅಮೆರಿಕದ ವಿದೇಶಾಂಗ ಇಲಾಖೆ ಪ್ರಕಟಿಸಿದೆ. ಮಾರ್ಕೊ ರೂಬಿಯೋ ಅವರು ವಿದೇಶಾಂಗ ಕಾರ್ಯದರ್ಶಿಯಾಗಿ ಅಧಿಕಾರ ವಹಿಸಿಕೊಂಡ ನಂತರ ಭಾರತಕ್ಕೆ ನೀಡುತ್ತಿರುವ ಮೊದಲ ಭೇಟಿ ಇದಾಗಿದೆ. ತಮ್ಮ ಈ ಪ್ರವಾಸದ ಅವಧಿಯಲ್ಲಿ ಅವರು ಕೋಲ್ಕತಾ, ಆಗ್ರಾ, ಜೈಪುರ ಮತ್ತು ನವದೆಹಲಿಗೆ ಭೇಟಿ ನೀಡಲಿದ್ದಾರೆ. ಭಾರತದ ಹಿರಿಯ ಅಧಿಕಾರಿಗಳೊಂದಿಗೆ ನಡೆಯಲಿರುವ ಸಭೆಗಳಲ್ಲಿ ಕಾರ್ಯದರ್ಶಿ ರೂಬಿಯೋ ಅವರು ಇಂಧನ, ಭದ್ರತೆ, ವ್ಯಾಪಾರ ಮತ್ತು ರಕ್ಷಣಾ ಸಹಕಾರದ ಕುರಿತು ಪ್ರಮುಖ ಚರ್ಚೆಗಳನ್ನು ನಡೆಸಲಿದ್ದಾರೆ ಎಂದು ಅಮೆರಿಕ ವಿದೇಶಾಂಗ ಇಲಾಖೆಯ ವಕ್ತಾರ ಟಾಮಿ ಪಿಗೋಟ್ ತಿಳಿಸಿದ್ದಾರೆ. ಮಾರ್ಕೊ ರೂಬಿಯೋ ಅವರ ಈ ಪ್ರವಾಸದ ಪ್ರಮುಖ ಭಾಗವಾಗಿ, ನವದೆಹಲಿಯಲ್ಲಿ ಇದೇ ೨೬ ರಂದು ನಡೆಯಲಿರುವ 'ಕ್ವಾಡ್' ಒಕ್ಕೂಟದ ವಿದೇಶಾಂಗ ಸಚಿವರ ಸಭೆಯಲ್ಲಿ ಅವರು ಪಾಲ್ಗೊಳ್ಳಲಿದ್ದಾರೆ ಎಂದು ನವದೆಹಲಿಯಲ್ಲಿರುವ ಅಮೆರಿಕ ರಾಯಭಾರ ಕಚೇರಿ ಖಚಿತಪಡಿಸಿದೆ. ಭಾರತದ ವಿದೇಶಾಂಗ ವ್ಯವಹಾರಗಳ ಸಚಿವ ಡಾ.ಎಸ್.ಜೈಶಂಕರ್ ಅವರ ಅಧ್ಯಕ್ಷತೆಯಲ್ಲಿ ನಡೆಯಲಿರುವ ಈ ಉನ್ನತ ಮಟ್ಟದ ಸಭೆಯಲ್ಲಿ ಆಸ್ಟ್ರೇಲಿಯಾದ ವಿದೇಶಾಂಗ ಸಚಿವೆ ಪೆನ್ನಿ ವಾಂಗ್ ಮತ್ತು ಜಪಾನ್ ವಿದೇಶಾಂಗ ಸಚಿವ ಮೊಟೇಗಿ ತೋಶಿಮಿತ್ಸು ಭಾಗವಹಿಸಲಿದ್ದಾರೆ.

<>><><*><><<>

ಇ-ಫಾರ್ಮಸಿಗಳ ಮೂಲಕ ನಿಯಮಬಾಹಿರವಾಗಿ ಔಷಧಿ ಮಾರಾಟ ಮಾಡುವುದನ್ನು ವಿರೋಧಿಸಿ 'ಅಖಿಲ ಭಾರತ ಕೆಮಿಸ್ಟ್ಸ್ ಮತ್ತು ಡ್ರಗ್ಗಿಸ್ಟ್ಸ್ ಸಂಘಟನೆ' ಇಂದು ದೇಶಾದ್ಯಂತ ಮುಷ್ಕರಕ್ಕೆ ಕರೆ ನೀಡಿದೆ. ಇದರಿಂದಾಗಿ ದೇಶದ ಸುಮಾರು ೧೨.೪ ಲಕ್ಷ ಖಾಸಗಿ ಔಷಧಿ ಅಂಗಡಿಗಳು ಮುಚ್ಚುವ ಸಾಧ್ಯತೆಯಿದ್ದು, ಔಷಧ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಬಹುದು. ಆನ್‌ಲೈನ್ ಫಾರ್ಮಸಿಗಳು ವೈದ್ಯರ ಚೀಟಿಗಳನ್ನು ಸರಿಯಾಗಿ ಪರಿಶೀಲಿಸುತ್ತಿಲ್ಲ ಹಾಗೂ ಮಾದಕ ದ್ರವ್ಯಗಳು ಮತ್ತು 'ಷೆಡ್ಯೂಲ್ ಎಚ್' ಔಷಧಿಗಳನ್ನು ಸುಲಭವಾಗಿ ವಿತರಿಸುತ್ತಿವೆ ಎಂದು ಸಂಘಟನೆಗಳು ಆರೋಪಿಸಿವೆ. ಅಲ್ಲದೆ, ಕೊರಿಯರ್ ಮೂಲಕ ತಲುಪಿಸುವಾಗ ಇವುಗಳ ಸಂಗ್ರಹಣಾ ತಾಪಮಾನದ ನಿಯಮ ಉಲ್ಲಂಘನೆಯಾಗುತ್ತಿದ್ದು, ಇದು ರೋಗಿಗಳ ಆರೋಗ್ಯಕ್ಕೆ ಹಾನಿಕರ ಎಂದು ಪ್ರತಿಭಟನಾಕಾರರು ದೂರಿದ್ದಾರೆ. ಆದರೆ, ರೋಗಿಗಳಿಗೆ ತೊಂದರೆಯಾಗದಂತೆ ತಡೆಯಲು ದೇಶದ ಎಲ್ಲಾ 'ಪ್ರಧಾನಮಂತ್ರಿ ಭಾರತೀಯ ಜನೌಷಧಿ ಕೇಂದ್ರಗಳು' ಎಂದಿನಂತೆ ತೆರೆದಿರಲಿವೆ ಎಂದು ಅಧಿಕಾರಿಗಳು ಖಚಿತಪಡಿಸಿದ್ದಾರೆ.

<>><><*><><<>

ಸಾರ್ವತ್ರಿಕ ಆರೋಗ್ಯ ರಕ್ಷಣೆ ಮತ್ತು ಡಿಜಿಟಲ್ ಆರೋಗ್ಯ ಆವಿಷ್ಕಾರಕ್ಕೆ ಭಾರತ ಹೊಂದಿರುವ ಬದ್ಧತೆಯನ್ನು ಕೇಂದ್ರ ಆರೋಗ್ಯ ಸಚಿವ ಜಗತ್ ಪ್ರಕಾಶ್ ನಡ್ಡಾ ಪುನರುಚ್ಚರಿಸಿದ್ದಾರೆ. ಜಿನೀವಾದಲ್ಲಿ ನಡೆಯುತ್ತಿರುವ ೭೯ನೇ ವಿಶ್ವ ಆರೋಗ್ಯ ಸಭೆಯಲ್ಲಿ ಪಾಲ್ಗೊಂಡು ಮಾತನಾಡಿದ ಸಚಿವರು, ದೇಶಾದ್ಯಂತ ೧.೮೫ ಲಕ್ಷಕ್ಕೂ ಹೆಚ್ಚು 'ಆಯುಷ್ಮಾನ್ ಆರೋಗ್ಯ ಮಂದಿರ'ಗಳನ್ನು ಸ್ಥಾಪಿಸಿ ತಳಮಟ್ಟದಲ್ಲಿ ಉಚಿತ ಪ್ರಾಥಮಿಕ ಆರೋಗ್ಯ ಸೇವೆ ಒದಗಿಸಲಾಗುತ್ತಿದೆ ಮತ್ತು 'ಆಯುಷ್ಮಾನ್ ಭಾರತ್ ಡಿಜಿಟಲ್ ಮಿಷನ್' ಅಡಿಯಲ್ಲಿ ೮೮ ಕೋಟಿಗೂ ಹೆಚ್ಚು ವಿಶಿಷ್ಟ ಡಿಜಿಟಲ್ ಆರೋಗ್ಯ ಗುರುತುಗಳನ್ನು ಸೃಜಿಸಲಾಗಿದೆ ಎಂದು ಸಚಿವರು ಜಾಗತಿಕ ಸಮುದಾಯಕ್ಕೆ ಮಾಹಿತಿ ನೀಡಿದರು. ಇದೇ ಸಂದರ್ಭದಲ್ಲಿ ಭೂತಾನ್ ಮತ್ತು ನೇಪಾಳ ದೇಶಗಳ ಆರೋಗ್ಯ ಸಚಿವರೊಂದಿಗೆ ದ್ವಿಪಕ್ಷೀಯ ಮಾತುಕತೆ ನಡೆಸಿದ ಸಚಿವ ಜೆ.ಪಿ. ನಡ್ಡಾ, ಭಾರತದ 'ನೆರೆಹೊರೆ ಮೊದಲು' ನೀತಿಯನ್ನು ಪುನರುಚ್ಚರಿಸಿದರು. ಭೂತಾನ್‌ನಲ್ಲಿ ಜನೌಷಧಿ ಕೇಂದ್ರಗಳನ್ನು ಸ್ಥಾಪಿಸುವ ಸಾಧ್ಯತೆ ಹಾಗೂ ಟೆಲಿಮೆಡಿಸಿನ್ ಸೇರಿದಂತೆ ಡಿಜಿಟಲ್ ಆರೋಗ್ಯದ ಅತ್ಯುತ್ತಮ ತಂತ್ರಜ್ಞಾನಗಳನ್ನು ಹಂಚಿಕೊಳ್ಳುವ ಕುರಿತು ಅವರು ಸಮಾಲೋಚಿಸಿದರು.

<>><><*><><<>

ಇಂಡಿಯಾ ಸಂಸ್ಥೆಯ ಬೋಯಿಂಗ್ ೭೮೭-೮ ವಿಮಾನದ ಇಂಧನ ನಿಯಂತ್ರಣ ಸ್ವಿಚ್‌ಗಳ ತಪಾಸಣೆ ನಡೆಸುವಂತೆ ನಾಗರಿಕ ವಿಮಾನಯಾನ ಮಹಾನಿರ್ದೇಶನಾಲಯ-ಡಿಜಿಸಿಎ

ಆದೇಶಿಸಿದೆ.  ಈ ತಪಾಸಣೆಯನ್ನು ಡಿಜಿಸಿಎ ಅಧಿಕಾರಿಗಳ ಸಮ್ಮುಖದಲ್ಲೇ, ವಿಮಾನದ ಮೂಲ ಉಪಕರಣ ತಯಾರಕರ ಸಂಸ್ಥೆ-ಒಇಎಮ್ ನಲ್ಲಿ ನಡೆಸಬೇಕು ಎಂದು ಸೂಚಿಸಲಾಗಿದೆ. ಡಿಜಿಸಿಎ ನೀಡಿರುವ ಮಾಹಿತಿ ಪ್ರಕಾರ, ಏರ್ ಇಂಡಿಯಾದ ವಿಟಿ-ಎಎನ್‌ಎಕ್ಸ್ ನೊಂದಣಿ ಸಂಖ್ಯೆಯ ಬೋಯಿಂಗ್ ೭೮೭-೮ ವಿಮಾನವು, ಲಂಡನ್‌ನ ಹೀಥ್ರೂ ವಿಮಾನ ನಿಲ್ದಾಣದಿಂದ ಬೆಂಗಳೂರಿಗೆ ಎಐಸಿ-೧೩೨ ವಿಮಾನಯಾನ ಕೈಗೊಂಡ ನಂತರ, ಇದೇ ವರ್ಷ ಫೆಬ್ರವರಿ ೨ ರಂದು ತಾಂತ್ರಿಕ ಕಾರಣಗಳಿಗಾಗಿ ಕಾರ್ಯಾಚರಣೆ ಸ್ಥಗಿತಗೊಳಿಸಿತ್ತು.

<>><><*><><<>

ಮಹಿಳೆಯರ ಸಾಮಾಜಿಕ-ಆರ್ಥಿಕ ಉನ್ನತಿಗಾಗಿ ಮೂರು ಸಾವಿರ ರೂಪಾಯಿಗಳ ಖಚಿತವಾದ ಮಾಸಿಕ ಆರ್ಥಿಕ ಸಹಾಯವನ್ನು ಒದಗಿಸಲು ಪಶ್ಚಿಮ ಬಂಗಾಳ ಸರ್ಕಾರ 'ಅನ್ನಪೂರ್ಣ ಯೋಜನೆ'ಯನ್ನು ಪ್ರಾರಂಭಿಸಲಿದೆ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ಸಮಾಜ ಕಲ್ಯಾಣ ಇಲಾಖೆ ಪರಿಚಯಿಸಿದ ಈ ಯೋಜನೆ ಮುಂದಿನ ತಿಂಗಳ ೧ ರಿಂದ ಜಾರಿಗೆ ಬರಲಿದೆ. ಈ ಯೋಜನೆಯಡಿಯಲ್ಲಿ, ಹಣಕಾಸಿನ ಸಹಾಯವನ್ನು ನೇರ ಪ್ರಯೋಜನ ವರ್ಗಾವಣೆ ಅಥವಾ ಡಿಬಿಟಿ ಮೂಲಕ ಅರ್ಹ ಫಲಾನುಭವಿಗಳ ಆಧಾರ್- ಜೋಡಣೆಯಾಗಿರುವ ಬ್ಯಾಂಕ್ ಖಾತೆಗಳಿಗೆ ನೇರವಾಗಿ ವರ್ಗಾಯಿಸಲಾಗುತ್ತದೆ. ಈ ಯೋಜನೆಗೆ ಒಳಪಡಲು, ಮಹಿಳೆಯರು ೨೫ ರಿಂದ ೬೦ ವರ್ಷ ವಯಸ್ಸಿನವರಾಗಿರಬೇಕು, ಆದಾಯ ತೆರಿಗೆ ಪಾವತಿಸದಿರುವ ಮತ್ತು ಯಾವುದೇ ಶಾಶ್ವತ ಸರ್ಕಾರಿ ಉದ್ಯೋಗವನ್ನು ಹೊಂದಿರಬಾರದು ಅಥವಾ ರಾಜ್ಯ, ಕೇಂದ್ರ, ಶಾಸನಬದ್ಧ, ಪಂಚಾಯತ್, ಪುರಸಭೆ, ಸ್ಥಳೀಯ ಸಂಸ್ಥೆಗಳು ಅಥವಾ ಸರ್ಕಾರಿ ಅನುದಾನಿತ ಶಿಕ್ಷಣ ಸಂಸ್ಥೆಗಳಿಂದ ನಿಯಮಿತ ವೇತನ ಅಥವಾ ಪಿಂಚಣಿ ಪಡೆಯಬಾರದು. ಹೊಸ ಆದೇಶದ ಪ್ರಕಾರ, 'ಲಕ್ಷ್ಮೀರ್ ಭಂಡಾರ್' ಯೋಜನೆಯ ಅಸ್ತಿತ್ವದಲ್ಲಿರುವ ಎಲ್ಲಾ ಫಲಾನುಭವಿಗಳು 'ಅನ್ನಪೂರ್ಣ ಯೋಜನೆ'ಗೆ ಒಳಗೊಳ್ಳಲಿದ್ದಾರೆ.

<>><><*><><<>

ಇದೇ ೨೫ ರಿಂದ ಜೂನ್ ೬ ರವರೆಗೆ ಗೋವಾದ ಮಡಗಾಂವ್‌ನ ಪಂಡಿತ್ ಜವಾಹರಲಾಲ್ ನೆಹರು ಕ್ರೀಡಾಂಗಣದಲ್ಲಿ ನಡೆಯಲಿರುವ 'ಸಾಫ್ ಮಹಿಳಾ ಚಾಂಪಿಯನ್‌ಶಿಪ್ ೨೦೨೬' ಫುಟ್‌ಬಾಲ್ ಪಂದ್ಯಾವಳಿಗೆ ಭಾರತದ ೨೬ ಸದಸ್ಯರ ಪ್ರಾಥಮಿಕ ತಂಡವನ್ನು ಮುಖ್ಯ ತರಬೇತುದಾರ ಕ್ರಿಸ್ಪಿನ್ ಛೇತ್ರಿ ಪ್ರಕಟಿಸಿದ್ದಾರೆ. ಪಂದ್ಯಾವಳಿ ಆರಂಭಕ್ಕೂ ಮುನ್ನ ೨೩ ಆಟಗಾರ್ತಿಯರ ಅಂತಿಮ ತಂಡವನ್ನು ಘೋಷಿಸಲಾಗುವುದು. ಪಂದ್ಯಾವಳಿಯ 'ಬಿ' ಗುಂಪಿನಲ್ಲಿರುವ ಭಾರತ ತಂಡವು ಇದೇ ೨೫ ರ ಉದ್ಘಾಟನಾ ದಿನದಂದು ಮಾಲ್ಡೀವ್ಸ್ ವಿರುದ್ಧ

ಆಡುವ ಮೂಲಕ ತನ್ನ ಅಭಿಯಾನ ಆರಂಭಿಸಲಿದ್ದು, ಇದೇ ೩೧ ರಂದು ಬಾಂಗ್ಲಾದೇಶವನ್ನು ಎದುರಿಸಲಿದೆ. 'ಎ' ಗುಂಪಿನಲ್ಲಿ ನೇಪಾಳ, ಶ್ರೀಲಂಕಾ ಮತ್ತು ಭೂತಾನ್ ತಂಡಗಳು ಸ್ಥಾನ ಪಡೆದಿವೆ. ಎರಡೂ ಗುಂಪುಗಳಿಂದ ಅಗ್ರ ಎರಡು ತಂಡಗಳು ಜೂನ್ ೩ ರಂದು ನಡೆಯಲಿರುವ ಸೆಮಿಫೈನಲ್‌ಗೆ ಅರ್ಹತೆ ಪಡೆಯಲಿದ್ದು, ಜೂನ್ ೭ ರಂದು ಪ್ರಶಸ್ತಿಗಾಗಿ ಅಂತಿಮ ಹಣಾಹಣಿ ನಡೆಯಲಿದೆ.

<>><><*><><<>

ಭಾರತೀಯ ಹಾಕಿ ಆಟಗಾರರ ದೈಹಿಕ ಸಾಮರ್ಥ್ಯವನ್ನು ಹಿರಿಯ ಕ್ರಿಕೆಟಿಗ ವಿರಾಟ್ ಕೊಹ್ಲಿ ಶ್ಲಾಘಿಸಿದ್ದಾರೆ. ಹಾಕಿ ಆಟಗಾರರ ದೈಹಿಕ ಸಾಮರ್ಥ್ಯಕ್ಕೆ ಹೋಲಿಸಿದರೆ, ಕ್ರಿಕೆಟಿಗರು ಶೇಕಡಾ ೧೫ ರಷ್ಟು ಫಿಟ್‌ನೆಸ್ ಹೊಂದಿಲ್ಲ ಎಂದು ಹೇಳಿದ್ದಾರೆ.  ನಿನ್ನೆ ನಡೆದ 'ಆರ್‌ಸಿಬಿ ಇನ್ನೋವೇಶನ್ ಲ್ಯಾಬ್ ಇಂಡಿಯನ್ ಸ್ಪೋರ್ಟ್ಸ್ ಶೃಂಗಸಭೆ'ಯಲ್ಲಿ ಮಾತನಾಡಿದ ಅವರು, ದೇಶದಲ್ಲಿ ಕ್ರಿಕೆಟ್‌ಗೆ ಸಿಗುವ ಅತಿಯಾದ ಗಮನದಿಂದಾಗಿ ಇತರ ಕ್ರೀಡೆಗಳನ್ನು ನಿರ್ಲಕ್ಷ್ಯ ಮಾಡಲಾಗುತ್ತಿದೆ ಎಂದರು. ಕೊಹ್ಲಿ ಅವರ ಈ ಹೇಳಿಕೆಯನ್ನು 'ಹಾಕಿ ಇಂಡಿಯಾ' ಮತ್ತು ಭಾರತ ಪುರುಷರ ಹಾಕಿ ತಂಡದ ನಾಯಕ ಹರ್ಮನ್‌ಪ್ರೀತ್ ಸಿಂಗ್ ಸೇರಿದಂತೆ ಪ್ರಮುಖ ಆಟಗಾರರು ಸ್ವಾಗತಿಸಿದ್ದಾರೆ.  ಈ ಮಾತುಗಳು ಕೇವಲ ಪ್ರಶಂಸೆಯಲ್ಲ, ಬದಲಿಗೆ ಆಧುನಿಕ ಹಾಕಿಗೆ ಅಗತ್ಯವಿರುವ ಕಠಿಣ ಪರಿಶ್ರಮ ಮತ್ತು ಶಿಸ್ತಿಗೆ ಸಿಕ್ಕ ದೊಡ್ಡ ಮನ್ನಣೆಯಾಗಿದೆ ಎಂದು ಹಾಕಿ ವಲಯ ಹರ್ಷ ವ್ಯಕ್ತಪಡಿಸಿದೆ.

<>><><*><><<>

ಜೈಪುರದ ಸವಾಯ್ ಮಾನ್ಸಿಂಗ್ ಕ್ರೀಡಾಂಗಣದಲ್ಲಿ ನಿನ್ನೆ ರಾತ್ರಿ ನಡೆದ ಐಪಿಎಲ್ ಟಿ-೨೦ ಕ್ರಿಕೆಟ್ ಪಂದ್ಯದಲ್ಲಿ ರಾಜಸ್ಥಾನ್ ರಾಯಲ್ಸ್ ತಂಡವು ಲಕ್ನೋ ಸೂಪರ್ ಜೈಂಟ್ಸ್ ತಂಡವನ್ನು ೭ ವಿಕೆಟ್‌ಗಳಿಂದ ಮಣಿಸಿದೆ.

<>><>< ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯಾಯಿತು ><><<>

<>><>< ನಮ್ಮ ಮುಂದಿನ ವಾರ್ತಾ ಪ್ರಸಾರ ಮಧ್ಯಾಹ್ನ ೧೨ ಕ್ಕೆ  ><><<>